ಮಹಾರಾಜರಿಗೆ ತಮ್ಮ ಬೇಸಿಗೆ ಅರಮನೆಯನ್ನು ಬಿಟ್ಟುಕೊಡಲು ಕೇಳಿದರು.

ಮೊದಲೇ ಕ್ರೀಡೆ, ಕಲೆ, ಸಂಸ್ಕೃತಿಯ ಪೋಷಕರಾಗಿದ್ದ ಮಹಾರಾಜರು ಮತ್ತು ಅವರ ಕುಟುಂಬವರ್ಗದವರು ಪೂರ್ಣ ಅನುಮತಿಯೊಂದಿಗೆ ಗುಣಸಿರಿಯ ಬೇಸಿಗೆ ಅರಮನೆಯನ್ನು ಅದಕ್ಕೆ ಹೊಂದಿಕೊಂಡ ಅಷ್ಟಿಷ್ಟು ಜಮೀನನ್ನು ಸಂತೋಷದಿಂದ ಬಿಟ್ಟುಕೊಟ್ಟಾಗ, ಗುಣಸಿರಿಯಲ್ಲಿ ರಾಜ್ಯದಲ್ಲಿಯೇ ಅಪರೂಪವಾದ ಒಂದು ಯೋಗ ವಿದ್ಯಾಲಯ ತಲೆ ಎತ್ತಿತು. ಇಲ್ಲಿ ಯೋಗ, ಕ್ರೀಡೆ, ಈಜು, ಕುದುರೆ ಸವಾರಿ ಹೀಗೆ ತರತರದ ವಿದ್ಯೆ ಹೇಳಿಕೊಡಲಾಗುವುದು, ವಸತಿಯುಕ್ತ ವಿದ್ಯಾಲಯವಾಗಿದ್ದು, ಎಂಟನೆಯ ತರಗತಿಯಿಂದ ಮೇಲಿನ ಮಕ್ಕಳು ಹೆಸರು ಹಚ್ಚಬಹುದು ಎಂದಾಗ ರಾಜ್ಯವ್ಯಾಪಿ ವಿದ್ಯಾರ್ಥಿಗಳು ಇಲ್ಲಿ ಕಲಿಯಲು ಬರತೊಡಗಿದರು.

ನೋಡನೋಡುತ್ತಿದ್ದಂತೆ ವಸತಿ ಯೋಗ ವಿದ್ಯಾಲಯ ಹತ್ತಾರು ಎಕರೆ ವಿಸ್ತೀರ್ಣ, ವಿವಿಧ ಕ್ರೀಡಾಂಗಣ, ಶಾಲಾ ಕೊಠಡಿಗಳು, ವಸತಿ ನಿಲಯಗಳು, ಈಜುಗೊಳ, ಭೋಜನಾಲಯ, ಕಲಾ ಮಂದಿರ, ವಿಜ್ಞಾನ ತಂತ್ರಜ್ಞಾನ ಕೊಠಡಿಗಳು ಮೊದಲಾದವುಗಳಿಂದ ವಿದ್ಯಾಲಯ ಬೃಹದಾಕಾರವಾಗಿ ಬೆಳೆಯತೊಡಗಿತು, ಆಟೋಟಗಳಲ್ಲಿ ಇಲ್ಲಿನ ಮಕ್ಕಳು ರಾಜ್ಯ ಮತ್ತು ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗತೊಡಗಿದರು. ರಾಜ್ಯ ಮತ್ತು ಕೇಂದ್ರ ಸರಕಾರಗಳ ಗಮನ ಸೆಳೆದು ಸೈ ಎನಿಸಿಕೊಂಡಿತು. ಒಂದು ಪ್ರೇಕ್ಷಣೀಯ ಸ್ಥಳವಾಗಿ ರೂಪುಗೊಂಡಾಗ ಜನ ಇಲ್ಲಿಗೆ ಬರುವುದು ಹೆಚ್ಚಾಗತೊಡಗಿತು. ರಾಜ್ಯದ ಬಹುತೇಕ ಜಿಲ್ಲೆಗಳ ವಿದ್ಯಾರ್ಥಿಗಳು ಇಲ್ಲಿದ್ದು ವಿದ್ಯಾಭ್ಯಾಸದೊಂದಿಗೆ ವಿವಿಧ ಆಟೋಟ, ಯೋಗ, ಈಜು, ಸೈಕ್ಲಿಂಗ್ ಮೊದಲಾದವನ್ನು ಕಲಿಯುವಂತಾಯಿತು. ಓದು ಮತ್ತು ಆಟದಲ್ಲಿ ಈ ಕೇಂದ್ರದ ಕೀರ್ತಿ ಮೊಳಗಿತು. ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಇಲ್ಲಿಯ ಬಾಲಕರು ವಿವಿಧ ಕ್ರೀಡೆ, ಯೋಗಾಸನಗಳಲ್ಲಿ ಹೆಸರು ಮಾಡಿದರು. ಬೇರೆ ಬೇರೆ ಮಂತ್ರಿಗಳು, ಮುಖ್ಯಮಂತ್ರಿಗಳು ಈ ಕೇಂದ್ರಕ್ಕೆ ಬರುವುದು, ಭೇಟಿ ಕೊಡುವುದು ನಡೆಯಿತು. ಹೀಗೆ ಈ ಕೇಂದ್ರವನ್ನು ನೋಡಲು ಬಂದಿದ್ದ ರಾಜ್ಯದ ಕ್ರೀಡಾ ಮಂತ್ರಿ ಬಾಪುರಾಮ ಅವರು ಈ ಕೇಂದ್ರಕ್ಕೆ ಏನಾದರೂ ಕಾಣಿಕೆ ಕೊಡಬೇಕೆಂದು ಮನಸ್ಸು ಮಾಡಿ ರಾಜಧಾನಿಗೆ ಹೋದವರು ಅಲ್ಲಿಂದ ಕೇಂದ್ರದ ಮುಖ್ಯಸ್ಥರಿಗೆ ದೂರವಾಣಿ ಕರೆ ಮಾಡಿ ‘ರಾಜಧಾನಿಯಿಂದ ಒಂದು ಅತ್ಯುತ್ತಮವಾದ ಕುದುರೆಯನ್ನು ನಿಮ್ಮ ಕೇಂದ್ರಕ್ಕೆ ಕಳಿಸುತ್ತಿದ್ದೇನೆ, ಇದು ನಿಮ್ಮ ಕೇಂದ್ರದ ಮಕ್ಕಳಿಗೆ ಕುದುರೆ ಸವಾರಿ ಕಲಿಸಲು ಅನುಕೂಲವಾಗುತ್ತದೆ’ ಎಂಬ ಸಂದೇಶದೊಂದಿಗೆ ಕುದುರೆಯನ್ನು ಕಳಿಸುವ ವ್ಯವಸ್ಥೆ ಮಾಡಿದರು.

***

ಸಚಿವ ಬಾಪುರಾಮ ಅವರು ಕಳಿಸಿದ ಕುದುರೆ ಅಂತಿಂಥ ಕುದುರೆಯಾಗಿರಲಿಲ್ಲ. ಇಡೀ ದೇಶದ ಜನತೆಯನ್ನು ರವಿವಾರದ ಟೀವಿ ಎದುರು ಕೂಡುವಂತೆ ಮಾಡಿದ್ದ ‘ರಾಮಾಯಣ’ ಸೀರಿಯಲ್‌ನಲ್ಲಿನ ಅಶ್ವಮೇಧಯಾಗದ ಕುದುರೆಯಾಗಿತ್ತು. ಬಾಪುರಾಮ ಅವರು ತುಂಬಾ ಖರ್ಚು ಮಾಡಿ ಈ ಕುದುರೆಯನ್ನು

